ಶ್ರೀ ಅಬ್ದುಲ್ ಸಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನೆ ಮಂತ್ರಿಗಳು).—

ಅ) ಹಳೇಕನಿಯ, ಹೊಸದೂಪನಹಳ್ಳಿ, ಬೇಗೂರು, ದೊಡ್ಡತಾಂಡ, ಸಾಲೂರು, ಕನಸೋಗಿ ಕಪ್ಪನಹಳ್ಳಿ, ಜೆ.ಹೆಚ್.ಸಿ. ಕೊರಟಗೆರೆ, ಸಾದಾಪುರ, ತಾಳಗುಂದ, ಬೋವಿಕಾಲೋನಿ, ಶೆಲ್ವಂತನಕೊಪ್ಪ ಚಿಕ್ಕಜಂಬೂರು, ಎಂ ಜಿ. ವಂಚಡಿ, ಕೂಗರ್ಸಿ ಹೈಸ್ಕೂಲು, ತಾಳಗುಂದ ವೀರಭದ್ರೇಶ್ವರ ದೇವಸ್ಥಾನ ಶಿವಾಜಿಕನಿಯ, ಕಾಳೇನಹಳ್ಳಿ ಬೋವಿಕಾಲೋನಿ, ಪುನೇನಹಳ್ಳಿ ಮಾಚಿಕೊಪ್ಪ ಮಂತ್ತು ಶಿವನಪಾದ.

ತಾಂತ್ರಿಕ ಸಿಬ್ಬಂದಿಯ ಕೊರತೆ ಹಾಗೂ ಜೆ.ಏ. ಪೈಪುಗಳ ಕೊರತೆಗಳ ಕಾರಣ, ಕೈಪಂಪುಗಳನ್ನು ಅಳವಡಿಸಲಾಗಲಿಲ್ಲ.

ಆ) ೧೯೮೭-೮೮

———

ಭದ್ರಾವುರ, ನಳಿನಿಕೊಪ್ಪ, ಹರಿಗೆ, ಎ. ಜಿ. ವಂಚಡಿ, ಮೂಡಲಸಿದ್ದಾಪುರ, ಕರ್ನಲಿ, ಗೊದ್ದನಕೊಪ್ಪ, ಬಳಿಗೆ ವಂತ್ತು ಹೊಸೂರು.

೧೯೮೮-೮೯-ನಿರುವುದಿಲ್ಲ.

———

ಜಲವೂಲ ನಿರ್ಣಯವಾಗುವುದರಲ್ಲಿ ವಿಳಂಬ, ಪಂಪುಸೆಟ್ಟುಗಳ ಪೂರೈಕೆಯಲ್ಲಿ ವಿಳಂಬ ವಂತ್ತು ವಿದ್ಯುತ್ ಸರಬರಾಜು ಆಗದೇ ಇರುವ ಕಾರಣ.

ಇ) ವರ್ಷ ಯೋಜನೆಯಲ್ಲಿ ಖರ್ಚು ಮಾಡಿ ಒದಗಿಸಿದ ಹಣ.

(ಲಕ್ಷಗಳಲ್ಲಿ)

೧೯೮೬-೮೭	೩.೨೨೫	೨.೫೩	೦.೬೯೫
೧೯೮೭-೮೮	೭.೮೦೬	೪.೪೪೧	೨.೯೬೫

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆ

೧೪೮೪. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೃಹ ಮಂಡಳಿಯಿಂದ ಗೃಹ ನಿರ್ಮಾಣ ಯೋಜನೆ ಸರಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ಎಷ್ಟು ಎಕ್ರೆ ಭೂವಿಯವನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಹಾಗೂ ಯಾವ ಸ್ಥಳಗಳಲ್ಲಿ ?

ಇ) ೧೯೮೮ನೇ ಮಾರ್ಚ್ ಆಖೈರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೃಹ ಮಂಡಳಿಯಿಂದ ಕಟ್ಟಿಸಿರುವ ಮತ್ತು ಕಟ್ಟಿಸಲು ಉದ್ದೇಶಿಸಿರುವ ಮನೆಗಳ ಸಂಖ್ಯೆ ಎಷ್ಟು ?

ಈ) ಅಪೂರ್ಣವಾಗಿರುವ ಮನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಮೊಹಮದ್ ಮೊಯಿನುದ್ದೀನ್ (ರಾಜ್ಯ ವಸತಿ ಸಚಿವರು).—

ಅ) ಹೌದು.

ಆ) ಮಂಗಳೂರು ತಾಲ್ಲೂಕು ಕಸಬ ಹೋಬಳಿ ಕುಡುಪು ಗ್ರಾಮದಲ್ಲಿ ೧೮.೨೮ ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಅದೇ ತಾಲ್ಲೂಕಿನ ತಿರುವೇಲು ಗ್ರಾಮದಲ್ಲಿ ಮಂಡಳಿಯು ಈಗಾಗಲೇ ೫.೦೦ ಎಕರೆ ಜಮೀನನ್ನು ಹೊಂದಿದೆ.

ಇ) ಕರ್ನಾಟಕ ಗೃಹ ಮಂಡಳಿಯಿಂ ಆರಂಭವಾದಂದಿನಿಂದ ಒಟ್ಟು ೧೭೬೨ ಮನೆಗಳನ್ನು ೧೯೮೮ ಮಾರ್ಚ್ ಅಖೈರವರೆಗೆ ನಿರ್ಮಿಸಿದೆ. ಅಲ್ಲದೆ ಕಾರ್ಕಳದಲ್ಲಿ ಹಂಡ್ಕೋ ಸಂಸ್ಥೆಯ ನೆರವಿನಿಂದ ಒಂದು ಹೊಸ ಯೋಜನೆಯನ್ನು ರೂಪಿಸಿದ್ದು ಅದರಲ್ಲಿ ೧೨೮ ವಿವಿಧ ವರ್ಗಗಳ ಮನೆಗಳನ್ನು ನಿರ್ಮಿಸಲಾಗುವುದು.

ಈ) ಶಿವಳ್ಳಿ ಮಣಿಪಾಲದಲ್ಲಿ ೨೧೩ ಮನೆಗಳನ್ನು ಪದವು ಕುಂಜತೆ ಜೈಲಿನಲ್ಲಿ ೧೮೨ ಮನೆಗಳು ಮತ್ತು ಮೂಡಬಿದ್ರೆಯಲ್ಲಿ ೨೨ ಮನೆಗಳ ಕಾರ್ಯ ಪ್ರಾಯ ಹಂತದಲ್ಲಿದ್ದು ಈ ವರ್ಷದ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ನಿರೀಕ್ಷೆಯಲ್ಲಿದೆ.

ಅಕ್ರಮ ಗಗನಚುಂಬಿ ಕಟ್ಟಡಗಳ ಬಗ್ಗೆ

೨೨೦೨. ಶ್ರೀ ಬಿ. ಎಂ. ಇದಿನಬ್ಬ.–ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ ?

ಅ) ಮಂಗಳೂರು ನಗರದ ಮಹಾನಗರಪಾಲಿಕೆಯಲ್ಲಿರುವ ಗಗನಚುಂಬಿ ಕಟ್ಟಡಗಳ ಸಂಖ್ಯೆ ಎಷ್ಟು ? (ಪಾಲೀಕರ ವಿವರ ನೀಡುವುದು)

ಆ) ಕಾನೂನು ಬಾಹಿರವಾಗಿ ರಸ್ತೆಗೆ ತಾಗಿಕೊಂಡೆ ಆಗಿರುವ ಕಟ್ಟಡಗಳೆಷ್ಟು (ಪಾಲೀಕರ ವಿವರ ನೀಡುವುದು) ?

ಇ) ಇಂತಹ ಕಟ್ಟಡಗಳನ್ನು ಕಟ್ಟುವುದನ್ನು ತಡೆಗಟ್ಟಲು ಮತ್ತು ಕಟ್ಟಿರುವ ಕಟ್ಟಡಗಳ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೭೨

ಪಾಲೀಕರ ವಿವರದ ಬಗ್ಗೆ ಅನುಬಂಧ ಲಗತ್ತಿಸಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ವಿಧಾನಸಭಾ ಸದಸ್ಯರಾದ ಶ್ರೀ ಬಿ. ಎನ್. ಇದಿನಬ್ಬರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೨೨೦೨ಕ್ಕೆ ಅನುಬಂಧ

೧	ಶ್ರೀ ಕೆ. ಸೋಮಯ್ಯ ಮೇಸ್ತ್ರಿ ಅಂಡ್ ಸನ್ಸ್, ಕೆಂಬಾರ್, ಮಂಗಳೂರು	೮೧ ಬಿಎಚ್ ಕಾವೂರು
೨	ಶ್ರೀ ಗಣೇಶ್ ಶಿಪ್ಪಿಂಗ್ ಏಜನ್ಸಿ, ದೇರಬೈಲು ಮಂಗಳೂರು	೩೩.೩ಎ ಕೂಳೂರು ಗ್ರಾಮ
೩	ಅಧ್ಯಕ್ಷರು, ಮಂಗಳೂರು ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರಿ ಸಂಘ, ಕೂಳೂರು, ಮಂಗಳೂರು	೩೧.೫೬೨ ಪಡುಕೋಡಿ ಗ್ರಾಮ
೪	ಶ್ರೀ ಕೆ. ಯಂ. ರಾವ್, ಪಿ, ಎ. ಹೋಲ್ಡರ್ ಆಫ್ ರಷೀದ್ ಪೊಂತೆರೋ, ಪಂಚಾಮೃತ ಐಸ್ ಫ್ಯಾಕ್ಟರಿ ಬಳಿ, ಕಂಳ್ಯಾ ಮಂಗಳೂರು	೨೫.೧೩ ೩೦.೯೩, ಬೆಂಗ್ರೆಕೂಳೂರು ಗ್ರಾಮ
೫	ಶ್ರೀಮತಿ ಕೆ. ಲಿಂಗವ್ಮ, ಸಿರಿಬಿನ್ನ ಭವನ ಕಂಕನಾಡಿ ಮಂಗಳೂರು	೩೪.೩೬೧, ಕಂಕನಾಡಿ ಗ್ರಾಮ